೧–೦೦ ಪಿ. ಎಂ.

2) ಅಡಿಸೊನ್ನೆಟ್ಟಿ ಗ್ರಾಮದಲ್ಲಿ ಸರ್ಕಾರದವರು ತೋಡಿರುವ ಕೊಳವೆ ಬಾವಿಯನ್ನು ಭೂ ಮಾಲೀಕ ಸ್ವಂತ ಲಾಭಕ್ಕೆ ಉಪಯೋಗಿಸಿ ಕೊಳ್ಳುತ್ತಿರುವುದು,

ಶ್ರೀ ಬಿ. ಗಂಗಣ್ಣ.—(ಸದಸ್ಯರು ಹಾಜರಿಲ್ಲ)

ಶ್ರೀ ಎಂ. ಪಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ನನ್ನ ಮತದಾರ ಕ್ಷೇತ್ರದ ಅಡಿಸೊನ್ನೆಟ್ಟಿ ಎಂಬ ಗ್ರಾಮದಲ್ಲಿ ಸಾರ್ವಜನಿಕರ ಬಹುಕಾಲದ ಬೇಡಿಕೆಯಾದ ಕುಡಿಯುವ ನೀರಿನ ಬಗ್ಗೆ ಒಂದು ಕೊಳವೆ ಬಾವಿಯನ್ನು ಆರು ತಿಂಗಳ ಹಿಂದೆ ಕೊರೆಯಲಾಗಿತ್ತು. ಆಸುಪಾಸಿನ ಜನರಿಗೆ ಅದರಿಂದ ತುಂಬಾ ಅನುಕೂಲವಾಗಿತ್ತು. ಅವರ ನೀರಿನ ಬವಣೆ ನೀಗಿದ ಸಂತೋಷದಲ್ಲಿರುವಾಗ ಈಗ ಆ ಕೊಳವೆ ಬಾವಿಯ ಸಮೀಪದ ಜಾಗದ ಭೂ ಮಾಲೀಕರೊಬ್ಬರು ಆ ಕೊಳವೆ ಬಾವಿಯನ್ನು ತನ್ನ ಸ್ವಂತದೆಂದು ಹೇಳಿ ಸಾರ್ವಜನಿಕರಿಗೆ ನೀರನ್ನು ಉಪಯೋಗಿಸಲು ಅಡೆತಡೆ ಉಂಟು ಮಾಡಿದ್ದಲ್ಲದೆ ತನ್ನ ಸ್ವಂತ ಉಪಯೋಗಕ್ಕಾಗಿ ಪಂಪುಸೆಟ್ಟನ್ನು ಹಾಕಲು ಉದ್ದೇಶಿಸಿರುತ್ತಾರೆ. ಆದ್ದರಿಂದ ಸರ್ಕಾರದವರು ಈ ಕುರಿತಂ ಸೂಕ್ತ ತನಿಕೆ ನಡೆಸಿ ಸಾರ್ವಜನಿಕರಿಗಾಗಿ ಸರ್ಕಾರ ತೋಡಿಸಿದ ಈ ಕೊಳವೆ ಬಾವಿಯ ಉಪಯೋಗ ಅವರಿಗೆ ಸಿಗುವಂತೆ ನೋಡಿಕೊಳ್ಳಬೇಕಾಗಿಯೂ, ಯಾರೇ ಆಗಲಿ ಸ್ವಂತ ಲಾಭಕ್ಕೆ ಬಳಸಿಕೊಳ್ಳದಂತೆ ನೋಡಿಕೊಳ್ಳಬೇಕಾಗಿಯೂ ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಆನೇಕಲ್ ತಾಲ್ಲೂಕಿನ ಅಡಿಸೊನ್ನೆಟ್ಟಿ ಎಂಬ ಗ್ರಾಮದಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಒಂದು ಕೊಳವೆ ಬಾವಿಯನ್ನು ಕೊರೆದಿದ್ದು ಸಮೀಪದ ಭೂಮಾಲೀಕರೊಬ್ಬರು ಅದು ತಮ್ಮ ಸ್ವಂತ ಜಾಗದಲ್ಲಿರುವುದೆಂದು ಸಾರ್ವಜನಿಕರಿಗೆ ತೊಂದರೆಯುಂಟು ಮಾಡಿದ್ದಾರೆ ಎಂಬುದಾಗಿ ಮಾನ್ಯ ಸದಸ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ಇದನ್ನು ಪರಿಶೀಲಿಸಲಾಗಿ, ಈ ಕೊಳವೆ ಬಾವಿಯನ್ನು ಗ್ರಾಮದ ಪೂರ್ವಭಾಗದಲ್ಲಿ ಸುಮಾರು ೧೫೦ ಅಡಿ ದೂರದಲ್ಲಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯವರು ನಿರ್ಮಿಸಿರುವ ರಸ್ತೆಯ ಮಗ್ಗುಲಲ್ಲಿ ದಿನಾಂಕ ೧೭–೭–೧೯೬೭ ರಂದು ಬರ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕೊರೆಯಲಾಗಿದೆ. ಈ ಕೊಳವೆ ಬಾವಿಯ ಆಳ ೫೦.೨೯ ಮೀಟರುಗಳು. ಇಳುವರಿ ಗಂಟೆಗೆ ಸುಮಾರು ೫೦೦ ಗ್ಯಾಲನ್ನುಗಳು (೨೫೭೦೦ ಲೀಟರುಗಳು). ಇದಕ್ಕೆ ಕೈಪಂಪನ್ನು ಅಳವಡಿಸಿ ಈ ಬಾವಿಯು ಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಆ ಊರಿನ ಜನರು ಕುಡಿಯುವ ನೀರನ್ನು ಈ ಕೊಳವೆ ಬಾವಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಬಾವಿಯನ್ನು ಕೊರೆದ ದಿನ ಊರಿನ ಜನರು ಯಾರು ತಮ್ಮ ಸ್ವಂತ ಜಾಗ ಎಂದು ಅಡ್ಡಿ ಮಾಡಿಲ್ಲ. ಮಾನ್ಯ ಸದಸ್ಯರು ತಿಳಿಸಿರುವ ಹಾಗೆ ಈಚಾಗೆ ಪಕ್ಕದ ಜಮೀನಿನವರೊಬ್ಬರು ಅತಿಕ್ರಮಣ ಮಾಡಿ ಬಾವಿಯ ನೀರನ್ನು ಉಪಯೋಗಿಸಲು ಸಾರ್ವಜನಿಕರಿಗೆ ಅಡ್ಡಿ ಮಾಡುತ್ತಿದ್ದಾರೆ ಎಂಬ ವಿಷಯ ಈಗ ತಿಳಿದುಬಂದಿದೆ. ಇದನ್ನು ಪೂರ್ಣ ಪರಿಶೀಲನೆ ಮಾಡಿಸಿ ಕಾನೂನು ರೀತಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಸದ್ಯದಲ್ಲಿ ಊರಿನ ಜನರಿಗೆ ಕುಡಿಯುವ ನೀರಿಗೆ ತೊಂದರೆ ಇಲ್ಲ.

3) ವಾಣಿಜ್ಯ ತೆರಿಗೆ ಇಲಾಖೆಯಿಂದ ಸ್ಥಾಪಿಸಲ್ಪಟ್ಟ ಚೆಕ್‌ಪೋಸ್ಟ್‌ಗಳಲ್ಲಿ ರೈತರು ಬೆಳೆದ ಆಹಾರ ಪದಾರ್ಥಗಳಿಗೆ ಮಾರಾಟ ದಂಡ ವಿಧಿಸುತ್ತಿರುವುದು.

ಶ್ರೀ ಕೆ. ಕುಶಲ.—(ಸದಸ್ಯರು ಹಾಜರಿಲ್ಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ ಸ್ಥಾಪಿಸಲ್ಪಟ್ಟಿರುವ ಚೆಕ್‌ಪೋಸ್ಟುಗಳಲ್ಲಿ ಚೆಕ್‌ಪೋಸ್ಟಿನ ಆಕ್ಕಪಕ್ಕದ ರೈತರು ತಾವು ಸ್ವತ: ಬೆಳೆದ ಆಹಾರಪದಾರ್ಥಗಳನ್ನು ಮಾರಾಟ ಮಾಡಲು ಸಾಗಿಸುವಾಗ ಚೆಕ್‌ಪೋಸ್ಟ್‌ನಲ್ಲಿ ತಡೆಹಿಡಿದು ದಂಡವಿಧಿಸುವುದು, ಲಂಚ ಕೇಳುವುದು ಇತ್ಯಾದಿ ಕಿರುಕುಳಗಳು ಜಾಸ್ತಿಯಾಗಿ ನಡೆಯುತ್ತಿದೆ. ಇದರಿಂದ